# ದಿನಾಂಕ:02-07-2022 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ.38 ಹೆಚ್.ಎಂ.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾ.38ರ ನೋಡಲ್ ಅಧಿಕಾರಿಗಳು)
2. ಕೆ. ಎಂ. ಮೃತ್ಯುಂಜಯ, ಸಹಾಯಕ ಕಾರ್ಯಪಾಲಕ ಅಭಿಯಂತರರು.
3. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
4. ಕಾರ್ತಿಕ್ ಮಂಜು ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾರ್ಡ್ ನಂ.38.
5. ಮಹೇಶ್, ವರ್ಕ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾರ್ಡ್ ನಂ.38.
6. ರಾಜೇಶ್ ಬಿ.ಎನ್. ಕಿರಿಯ ಅಭಿಯಂತರರು, ಗೊರಗುಂಟೆಪಾಳ್ಯ ಉಪ ವಿಭಾಗ, ವಾರ್ಡ್ ನಂ.38.
7. ಸತೀಶ ಟಿ.ಡಿ. ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾರ್ಡ್ ನಂ.38.
8. ತನುಜಾ, ಕಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
9. ಸತೀಶ್, ಕಂದಾಯ ವಸೂಲಿಗಾರರು, ಹೆಚ್.ಎಂ.ಟಿ.ವಾರ್ಡ್ ನಂ.38.
10. ಕೆ.ಎಲ್. ಮಂಜುನಾಥ್, ಕಂದಾಯ ವಸೂಲಿಗಾರರು, ಹೆಚ್.ಎಂ.ಟಿ.ವಾರ್ಡ್ ನಂ.38.
11. ವೆಂಕಟೇಶ್ ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38.
12. ಬೈಲವೆಂಕಟಪ್ಪ, ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38.
13. ನಾಗೇಶ್ ಎಚ್. ಪ್ರೆಸಿಡೆಂಟ್, ವಾರ್ಡ್ ನಂ.38.
14. ಮೋಹಿನಿ ಬಿ.ಕೆ. ಲಿಂಕ್ ವರ್ಕರ್ ವಾರ್ಡ್ ನಂ.38.
15. ಭಾರತಿ ಎ. ಲಿಂಕ್ ವರ್ಕರ್ ವಾರ್ಡ್ ನಂ.38.
16. ಮುನಿರಾಜು ಮರ್ಷಲ್ ವಾರ್ಡ್ ನಂ.38.
17. ದೇವರಾಜು, ಗಾರ್ಬೇಜ್ ಕಂಟ್ರಾಕ್ಟರ್, ವಾರ್ಡ್ ನಂ.38.

20\. ಕಾಂತರಾಜು, ಮರ್ಷಲ್ ವಾರ್ಡ್ ನಂ.38.

ಮಾನ್ಯ ಅಧ್ಯಕ್ಷರು, ಮೇಲೆ ಹಾಜರಿದ್ದ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38ರ ಸಭೆಯನ್ನು ಉದ್ದೇಶಿಸಿ ಸ್ವಾಗತ ಕೋರಿದರು.

ಆರೋಗ್ಯ ಪರಿವೀಕ್ಷಕರು ರವರು ವಾರ್ಡ್ 38ರಲ್ಲಿ ಕೋವಿಡ್-19 ಪ್ರಕರಣಗಳು ಮತ್ತು ಡೆಂಗ್ಯೂ ಜ್ವರದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳಾದ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಕ್ರಮಗಳನ್ನು ವಹಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸಹಾಯಕ ಅಭಿಯಂತರರು ರವರು ಮಾತನಾಡಿ ವಾರ್ಡ್‌ನಲ್ಲಿನ ಎಲ್ಲಾ ರಸ್ತೆಗಳನ್ನು ಪರಿಶೀಲಿಸಿ ರಸ್ತೆ ಗುಂಡಿಗಳನ್ನು ಮುಚ್ಚುವ ಕ್ರಮವಹಿಸಲಾಗುವುದೆಂದು ತಿಳಿಸಿರುತ್ತಾರೆ.

ಪೀಣ್ಯ ಇಂಡಸ್ಟ್ರೀಯಲ್ ಪ್ರದೇಶದಲ್ಲಿ ಸಿಲ್ಟ್‌ಅನ್ನು ಸಂಪೂರ್ಣ ತೆಗೆದಿದ್ದು, ಮತ್ತೊಮ್ಮೆ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮು.ತೀ.ನೋ.

ಎಸ್.ಆರ್.ಎಸ್. ಸಿಗ್ನಲ್ ಬಳಿಯ ಬಿಬಿಎಂಪಿಯ ಕ್ರಿಮಿಟೋರಿಯಂ ಮುಂದೆ ಸಂಗ್ರಹವಾಗಿದ್ದ ಕಸವನ್ನು ತೆಗೆದು ಸ್ವಚ್ಛ ಮಾಡಲಾಗಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

ಗೊರಗುಂಟೆಪಾಳ್ಯದ ರಸ್ತೆಗಳ ಮೋರಿಗಳಲ್ಲಿನ ಸಿಲ್ಟ್‌ಅನ್ನು ಭಾಗಶಃ ತೆಗೆದಿದ್ದು, ಸಂಪೂರ್ಣವಾಗಿ ತೆಗೆಯಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ವಾರ್ಡಿನಲ್ಲಿನ ಮ್ಯಾನ್‌ಹೋಲ್‌ಗಳನ್ನು ಪರಿಶೀಲಿಸಿ ಮಳೆಯಿಂದಾಗುವ ಸಮಸ್ಯೆಗಳನ್ನು ಸಮಸ್ಯೆಗಳನ್ನು ಬಗೆಹರಿಸಲು ತಿಳಿಸಲಾಯಿತು.

ವಾರ್ಡ್‌ನಲ್ಲಿ ಮಾಡ್ರನ್ ಬ್ರೆಡ್ ಫ್ಯಾಕ್ಟರಿ ಹಿಂದಿನ ರಸ್ತೆಯಯಲ್ಲಿ ಬೀದಿ ದೀಪಗಳ ಸಮಸ್ಯೆ ಇದ್ದು ಅದನ್ನು ಸರಿಪಡಿಸಲು ಸೂಚಿಸಲಾಯಿತು.

ಮಳೆಗಾಲ ಹತ್ತಿರ ಬರುತ್ತಿರುವುದರಿಂದ ವಾರ್ಡ್‌ನಲ್ಲಿನ ಶಿಥಿಲವಾಗಿರುವ ಕಂಬಗಳು, ವಯರ್‌ಗಳು ಹಾಗೂ ಕೇಬಲ್‌ಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಮತ್ತೊಮ್ಮೆ ಸೂಚಿಸಲಾಯಿತು.

ವಾರ್ಡಿನ ಎಲ್ಲಾ ರಸ್ತೆಗಳನ್ನು ಪರಿಶೀಲಿಸಿ ಗುಂಡಿಗಳನ್ನು ಮುಚ್ಚಲು ಮತ್ತು ಮೋರಿಗಳನ್ನು ಸ್ವಚ್ಛಮಾಡಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ವಾರ್ಡ್‌ನಲ್ಲಿನ ರಸ್ತೆಗಳಲ್ಲಿ Desilting of Drainsನ್ನು ಕೂಡಲೇ ತುರ್ತು ಕಾರ್ಯ ಯೋಜನೆಯಡಿಯಲ್ಲಿ ಎಸ್ಟಿಮೇಟ್ ಸಿದ್ಧಪಡಿಸಿ ಕೆಲಸ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಮತ್ತೊಮ್ಮೆ ಸೂಚಿಸಲಾಯಿತು.

ಪೀಣ್ಯ ವಾರ್ಡ್ ಕಛೇರಿ ರಸ್ತೆಯಲ್ಲಿ ಸಂಜೆ ಹೊತ್ತಿನಲ್ಲಿ ಕುಡುಕರ ಹಾವಳಿ ಹೆಚ್ಚಾಗಿರುವುದಾಗಿ ಸಾರ್ವಜನಿಕರು ದೂರುಗಳು ಬಂದಿದ್ದು, ಇದರ ಬಗ್ಗೆ ಪೋಲೀಸ್ ರವರಿಗೆ ಈ ರಸ್ತೆಯಲ್ಲಿ ಹಾಗೂ ವಾರ್ಡ್‌ನಲ್ಲಿ ಹೆಚ್ಚಾಗಿ ಗಸ್ತು ತಿರುಗಿ ಕಾನೂನು ಸುವ್ಯವಸ್ಥೆ ಕಾಪಾಡಲು ತಿಳಿಸಲಾಗಿತ್ತು. ಸದರಿ ದೂರಿನ ಬಗ್ಗೆ ಕ್ರಮ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಹೆಚ್. ಭೀಮೇಶ್ ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

B. Salt

ಸದಸ್ಯ ಕಾರ್ಯದರ್ಶಿ ಹಾಗೂ
ಕಂದಾಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ.38

**ಪ್ರತಿಯನ್ನು:**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.